# MAHENDRAPPA IS A PROFOUND AND CONTENDED PERSONALITY

**Dr. ChikkannaYennekatte**
Dept.of Kannada, GFGC, Sira

## ಪರಮಗುಣ ಸಂಪನ್ನ – ಪಿ.ಹೆಚ್. ಮಹೇಂದ್ರಪ್ಪ

**ಡಾ॥ ಚಿಕ್ಕಣ್ಣಯಣ್ಣೆಕಟ್ಟೆ**

ಪ್ರಾಂಶುಪಾಲ ಪಿ.ಹೆಚ್. ಮಹೇಂದ್ರಪ್ಪನವರನ್ನು, 'ಸಿರ್‍ಯಾ ಸೀಮೆ ಎಂದೂ ಮರೆಯಬಾರದ ಮಹಾಚೇತನ.' ಈ ಮಹಾಚೇತನ ಎಂಬುದು ಕೇವಲ ತೋರಿಕೆಯ ಹೇಳಿಕೆಯಾಗಿ ಮಾಸಿ ಹೋಗುವಂತಹುದಲ್ಲ. ಇವರು ತಮ್ಮ ಪ್ರಾಚಾರ್ಯ ಹುದ್ದೆಯ ಒಂಬತ್ತು ವರ್ಷಗಳ ಒಳಗೆ ಒಂದು ಬಾಲಕಿಯರ ಸರ್ಕಾರಿ ವಿದ್ಯಾಲಯವನ್ನು ಕಟ್ಟಿರುವ ರೀತಿ, ಮಾಡಿರುವ ವೈವಿಧ್ಯ ಸಾಧನೆ, ತಂದಿರುವ ಸಿ.ಇ.ಟಿ. ಪರೀಕ್ಷಾ ಕೇಂದ್ರ ಹಾಗೂ ಇತರೆ ಕೇಂದ್ರಗಳು, ಪರೀಕ್ಷಾ ಪೂರ್ವತಯಾರಿ ತರಬೇತಿಗಳ ನಿಯೋಜನೆ, ವಿವಿಧ ವಿದ್ಯಾರ್ಥಿದತ್ತಿ–ನಿಧಿ ಬಹುಮಾನ–ಹಣಕಾಸಿನ ಪ್ರೋತ್ಸಾಹದಾಯಕ ನೆರವು, ಇವು ಒಂದು ಬಗೆಯವಾದರೆ, ಅತ್ತ ಐ.ಬಿ. ಸರ್ಕಲ್–ಇತ್ತ ಕುರುಬರಹಟ್ಟಿ ಇವುಗಳ ನಡುವೆ ಕಕ್ಕಸ್‌ಗುಂಡಿಯಾಗಿ ಸೂತಕದ ನೆಲೆಯಂತಿದ್ದ, ಕರ್ಣಸೌಧದ ಒಂದು ಕೊಠಡಿಯನ್ನು ಕೇಂದ್ರವಾಗಿರಿಸಿಕೊಂಡು, ಬಾಲಕಿಯರ ಸರ್ಕಾರಿ ಪದವಿ ಪೂರ್ವಕಾಲೇಜು ಆರಂಭಿಸಿದಾಗ ಇವರು ಪ್ರಾಂಶುಪಾಲರಾಗಿ–ಇದರ ಸರ್ವತೋಮುಖ ಬೆಳವಣಿಗೆ ಭವ್ಯ ಕಟ್ಟಡಗಳು, ಕ್ಯಾಂಪಸ್, ಪ್ರಾರ್ಥನಾ ಮಂದಿರ, ಪ್ರಯೋಗಾಲಯ, ಸೆಮಿನಾರ್‌ಹಾಲ್. ಕಲಾಭವನ– ಮೊದಲಾದ ಸುಸಜ್ಜಿತ ವಿಶ್ವವಿದ್ಯಾಲಯದ ಮಾದರಿಗೆ ದುಡಿದು, ರಾಜ್ಯಕ್ಕೆ ಮಾದರಿಯಾಗಿ ತಮ್ಮ  ಜನಪರ, ವಿದ್ಯಾಪರ, ಸಂಘಟನಾತ್ಮಕ ಸಾಧನೆಗಾಗಿ ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಿಂದ "ಶ್ರೇಷ್ಠ ಪ್ರಾಂಶುಪಾಲಕರು ಪ್ರಶಸ್ತಿ (2014)" ಪಡೆದ ಬಗೆಇದೆಯಲ್ಲಾ ಇದೊಂದು ಅಪರೂಪವಾದುದ್ದು ತಮಗೆ ತಾವೇ ಮಾದರಿಯಾದ ಬಗೆ, ಹೀಗಾಗಿಯೇ ಇವರನ್ನು "ನಿಜವಾದ ಸೇವೆಯ ಮಹಾಚೇತನ" ಎಂಬುದು ಅರ್ಥಪೂರ್ಣ ಒಪ್ಪಿತ ಮಾತು. ಈ ಮೂಲಕ ಮಹೇಂದ್ರಪ್ಪನವರು ಹೆತ್ತ ನೆಲಕ್ಕೆ ಸಿಕ್ಕ ಅನ್ನಕ್ಕೆ ಮುಕ್ಕು ಬಾರದ ಹಾಗೆ ನಡೆದುಕೊಂಡು, ತಮ್ಮ ಸತ್ಯ, ಶುದ್ಧಕಾಯಕತ್ವದಿಂದಾಗಿ, ಭೂಮಿತೂಕದ ವ್ಯಕ್ತಿತ್ವ ಕಾಯ್ದುಕೊಂಡವರು. ತಮ್ಮ ಸರ್ಕಾರಿ ಸೇವೆ ಎಂಬ ಸೀಮಿತ ಬಂಧನದಿಂದ ಬಿಡುಗಡೆ ಎಂಬ ಒಂದು ಪರ್ವವನ್ನು ಮುಗಿಸಿದರು. ಇದು ಕೇವಲ ಒಂದು ಬಿಡುಗಡೆಯ ನೆಪ. ಮಹೇಂದ್ರಪ್ಪನವರು ರೂಢಿಸಿ ಬೆಳೆಸಿಕೊಂಡಿರುವ ಸಾಂಸ್ಕೃತಿಕತನ, ಗಾಢ ಆಧ್ಯಾತ್ಮಿಕ ವಿಚಾರಪರತೆ ವಿಸ್ತಾರಗೊಳ್ಳುತ್ತಲೇ ಇದೆ, ಅದು 'ಸಿರಾ ಸೀಮೆ' ಎಂಬ ಸೀಮಿತ ಗಡಿಯನ್ನು ಮೀರಿರಾಷ್ಟ್ರೀಯ ಮಟ್ಟದತನಕ, ಇವರತನ ನಾನಾ ಕ್ಷೇತ್ರಗಳಲ್ಲಿ ವ್ಯಾಪಿಸಿಕೊಂಡು. ಆ ಎಲ್ಲಾ ಕಡೆಯೂ ವೃತ್ತಿ ಮತ್ತು ವ್ಯಕ್ತಿತ್ವಕ್ಕೆ ಭವ್ಯವಾದ ವ್ಯಕ್ತಿತ್ವವನ್ನು ಸಂಪಾದಿಸಿರುವುದು ಇವರ ವಿಶೇಷ. ಇದಕ್ಕೆ ಅಪ್ಪಟ

ರುಜುನಾಮ ತಮ್ಮ ಸರ್ಕಾರಿ ಸೇವೆಯ ಬಿಡುಗಡೆಯ ಒಂದು ಸಂದರ್ಭ ಉಲ್ಲೇಖನಾರ್ಹ, ಅದೊಂದು ಕರ್ನಾಟಕ ಕೇಳರಿಯದ ನೆನಪು, ಯುವರನ್ನು ಸ್ಪರಿಸಿ ಇವರು ಕಾರ್ಯನಿರ್ವಹಿಸಿದ ಎಲ್ಲಾ ಭಾಗಗಳಿಂದಲೂ ಅಧಿಕಾರಿಗಳು, ಭೋದಕರು, ವಿಧ್ಯಾರ್ಥಿಗಳೂ, ಅದನ್ನೇಲ್ಲಾ ಮೀರಿ ಮಕ್ಕಳ ಪ್ರಗತಿಗೆ ಶ್ರಮಿಸಿದ್ದನ್ನು ಸಾಕ್ಷಿಯಾಗಿಸಿ ಜನಸಾಮಾನ್ಯರು ಇವರನ್ನು ತೆರೆದ ಜೀಪ್ ನಲ್ಲಿ ಕೂರಿಸಿ ಊರು ತುಂಬಾ ಮರೆವಣಿಗೆ ಮಾಡಿದ ಬಗೆ, ತೋರಿದ ದೈವೀಭಾವ, ಆಡಿದ ನೈಜ–ಒಪ್ಪಿತ ನುಡಿ–ಮನ ಮಹೇದ್ರಂಪ್ಪ ಅವರಿಗೆ ಮಹೇಂದ್ರಪ್ಪನವರೇ ಸಾಟಿ ಎಂಬಂತಿದ್ದು. ಈ ಸಂದರ್ಭ ಎರಡು ಕಡೆ ಉಲ್ಲೇಖನಿಯ, ಪ್ರೋ.ಸರ್ವಪಲ್ಲಿ ರಾಧಾಕೃಷ್ಣನ್ ಅವರು ಮೈಸೂರಿನ ಮಹಾರಾಜ ಕಾಲೇಜಿನಿಂದ ಕಲ್ಕತ್ತೆಗೆ ವರ್ಗಾವಣೆಯಾದ ಸಂದರ್ಭದಲ್ಲಿ ಅವರ ವಿಧ್ಯಾರ್ಥಿ–ಅಭಿಮಾನಿ ಬಳಗ ಮಹಾರಾಜ ಕಾಲೇಜಿನಿಂದ, ಮೈಸೂರಿನ ರೈಲ್ವೆ ನಿಲ್ದಾಣದ ತನಕ ರಥದಲ್ಲಿ ಕೂರಿಸಿ ತಮ್ಮ ಕೈಗಳಿಂದಲೇ ಎಳೆದುಕೊಂಡು ಹೋದ ಪ್ರಶಂಸೆ ಒಂದೆಡೆಯಾದರೆ, ಯುವಕರ ಮೊತ್ತೊಂದು ಭಾವ ಪ್ರಿನ್ಸಿಪಾಲ್ ಮಹೇಂದ್ರಪ್ಪನವರು, ಸರ್ಕಾರಿ ಸೇವಾ ನಿವೃತ್ತಿ ಪಡೆದ ಸಂದರ್ಭದ ದಿನ ನಡೆದ ಮೆರವಣಿಗೆ ನುಡಿ–ನಮನಗಳು ಇವರ ಸರಳ ಸಜ್ಜನಿಕೆ, ಕಾಯಕಯೋಗಿತ್ವದ ಪ್ರತಿಧ್ವನಿಯ ಮರುರೂಪ.

ಮಹೇಂದ್ರಪ್ಪನವರು ಹುಟ್ಟಿದ್ದು ಕರ್ನಾಟಕದ ಅಪ್ಪಟ ಬಯಲು ಸೀಮೆ, ಸಿರಾ ಸಮೀಪದ ಪಂಜಿಗಾನಹಳ್ಳಿ. ಒಂದು ಗ್ರಾಮ ಪಂಚಾಯಿತಿಯ ಕೇಂದ್ರಕ್ಕೂ ಪಕ್ಕದ ಲಕ್ಷ್ಮೀಸಾಗರಕ್ಕೇ ಹೋಗಬೇಕು. ಅಪ್ಪಟ ರೈತಾಪಿ ಕುಟುಂಬಗಳು ಭೂಮಿಯನ್ನು ತಾಯಿ ಎಂದು ಅದಕ್ಕೆ ತನ್ನೆಲ್ಲಾ ಶ್ರಮ ಹಾಕಿ ಬದುಕುವುದು ಈ ಗ್ರಾಮದ ನಂಬಿಕೆ. ಸ್ವಾಭಿಮಾನ, ಪರೋಪಕಾರ, ನಂಬಿದವರನ್ನು ಕೈಬಿಡದ ಸಂಸ್ಕಾರ ಸುಸಂಸ್ಕೃತ ಗ್ರಾಮ, ಯಾವುದೇ ಕಾಯಕ ಮಾಡಲಿ ಅಲ್ಲೊಂದು ಘನತೆ, ಗೌರವಗಳನ್ನು ಅಪೇಕ್ಷಿಸುವ ಜನವರ್ಗ ಹಲವು ವಿದ್ಯಾವಂತರನ್ನು, ಸರ್ಕಾರದ ಉನ್ನತ ಹುದ್ದೆಯ ನೌಕರರನ್ನು ಹೊಂದಿರುವ ಖ್ಯಾತಿಯೂ ಇದೆ. ಕಲಿಯಲು ಶಾಲೆ ಇಲ್ಲದ, ಊಟ–ವಸತಿಗಳಿಗೂ ಪರಿತಪ್ಪಿಸುವ ಇಲ್ಲಿ ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿಯೇ ಈ ಗ್ರಾಮ ಪ್ರಾಥಮಿಕ ಶಾಲೆ ಆರಂಭಿಸಿದ್ದು ರೋಚಕಚರಿತ್ರೆ, ಇಂಥ ಗ್ರಾಮದ ಅಪ್ಪಟ ಒಕ್ಕಲುತನದ ಶ್ರೀ ಹುನುಮಂತಪ್ಪ – ಶ್ರೀಮತಿ ಲಕ್ಷಮ್ಮ ದಂಪತಿಗಳು ಇವರಿಗೆ ಜನಿಸಿದ ಏಳು ಮಕ್ಕಳಲ್ಲಿ ನಾಲ್ವರು ಗಂಡು ಮೂರು ಹೆಣ್ಣು, ಈ ಕುಟುಂಬದ ಅರಿವು–ಅಕ್ಕರದ ಕಣ್ಣಾಗಿರೂಪು ಪಡೆದವರು ಪಿ.ಹೆಚ್. ಮಹೇಂದ್ರಪ್ಪನವರು.

ರೈತಾಪಿ ಮೂಲದ ಮಹೇಂದ್ರಪ್ಪ, ಅಕ್ಷರಜ್ಞಾನಕ್ಕಾಗಿ ಹಲವಾರು ಯಾತ್ರೆ ಮಾಡಿದವರು ಸತತ ಅಭ್ಯಾಸ, ಸ್ವ–ದುಡಿಮೆ, ಸ್ವಪ್ರತಿಭೆಯಿಂದಲೇ ಮೇಲೆ ಬಂದವರು. ಪಂಜಿಗಾನಹಳ್ಳಿ, ತಿಮ್ಮನಹಳ್ಳಿ ಸಿರಾದಲ್ಲಿ ಪ್ರಥಮಿಕ, ಪೌಥಶಿಕ್ಷಣ, ಪದವಿ ಪಡೆದು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಉನ್ನತ ದರ್ಜೆಯಲ್ಲಿ ರಾಜ್ಯಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದವರು. ಈ ಸಂದರ್ಭದಲ್ಲಿ ರೂಢಿಸಿಕೊಂಡಿದ್ದ ಸ್ಪುಟವಾದ ಮಾತುಗಾರಿಕೆ ಕಾವ್ಯಾತ್ಮಕ

ಭಾಷಣ, ಜನಪರ ಕಾಳಜಿ, ದಕ್ಷತೆಗಳಿಂದಾಗಿ ಚಲನ ಚಿತ್ರದ ಮೇರು ನಿರ್ದೇಶಕ ಪುಟ್ಟಣ್ಣಕಣಗಾಲ್ ಅವರ ಗಮನಸೆಳೆದರು. ಈ ಸಂಪರ್ಕ 'ಋಣಮುಕ್ತಳು' ಎಂಬ ಚಲನ ಚಿತ್ರದ ಸಹ ನಿರ್ದೇಶನಕ್ಕೂ ಪ್ರೇರಕವಾಯಿತು. ಮುಂದೆ ಶಿವಯೋಗಿ, ಅಕ್ಕಮಹಾದೇವಿ ಚಲನಚಿತ್ರಕ್ಕೂ ಮಹೇಂದ್ರಪ್ಪನವರು ಸಹ ನಿರ್ದೇಶಕರಾಗಿ, ಪಾತ್ರದಾರರಾಗಿಯೂ ಕಾರ್ಯನಿರ್ವಹಿಸಿದರು, ಚಲನಚಿತ್ರ ನಿರ್ದೇಶಕಎಸ್. ನಾರಾಯಣ್, ಟಿ.ಹೆಚ್. ವಿಶ್ವನಾಥ್ ಅವರಂಥ ಹಿರಿಯರೂ ಪಿ.ಹೆಚ್. ಮಹೇಂದ್ರಪ್ಪ ಅವರ ಜೊತೆಗೆ ಸಹ ಕಲಾವಿದರಾಗಿ ಸಹ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದರು ಎಂಬುದು ಇವರ ಹೆಗ್ಗಳಿಕೆ. ರಾಜ್ಯಶಾಸ್ತ್ರ ಪದವಿಯ ಪ್ರತಿಭಾವಂತ ವಿದ್ಯಾರ್ಥಿಯಾದ ಪಿ.ಹೆಚ್ ಮಹೇಂದ್ರಪ್ಪ ಅವರಿಗೆ ಬೋಧನೆಯ ಕಡೆ ಹೆಚ್ಚು ತುಡಿತ, ಇದನ್ನು ಶ್ರೀ ಪುಟ್ಟಣ್ಣಕಣಗಾಲ್ ಸಮರ್ಥವಾಗಿ ಗುರುತಿಸಿ ಮಾರ್ಗದರ್ಶನವನ್ನು ಮಾಡಿದರು, ಮಂಗಳೂರು ವಿಶ್ವವಿದ್ಯಾನಿಲಯದ ಕಲಾ ಕಾಲೇಜು ಮಂಗಳೂರು, ಇಲ್ಲಿಂದ ಇವರ ಅಧ್ಯಾಪಕ ಬದುಕು ಆರಂಭ, ಕುಂದಾಪುರದ ಗೋಳಿ ಅಂಗಡಿ, ಧಾರವಾಡದ ಗುಡಿಗೆರೆ, ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಇಲ್ಲೆಲ್ಲಾ ಜನ-ವಿದ್ಯಾರ್ಥಿ ಮೆಚ್ಚಿನ ಉಪನ್ಯಾಸಕರಾಗಿ, ಸಿರಾ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಇವರು ಮಾಡಿರುವ ಕಾರ್ಯ, ರೂಪಿಸಿರುವ ವಿಧ್ಯಾರ್ಥಿ ಸಮುದಾಯ ಅಪ್ರತಿಮವಾದುದು. ಈ ಅವಧಿಗಳಲ್ಲಿ ರಾಜ್ಯ ಪಠ್ಯಪುಸ್ತಕ ಸಮಿತಿಯ ಸದಸ್ಯರಾಗಿ, ಪಠ್ಯ ಪುಸ್ತಕ ರಚನಾಕಾರರಾಗಿಯೂ, ರಾಜ್ಯಶಾಸ್ತ್ರ, ಸಂವಿಧಾನ ಈ ಕುರಿತು ಹಲವಾರು ಪಠ್ಯ-ಪಠ್ಯಕೇಂದ್ರಿತ ಪುಸ್ತಕಗಳನ್ನು ರಚಿಸಿದ್ದಾರೆ, ಇದು ಪಿ.ಹೆಚ್. ಮಹೇಂದ್ರಪ್ಪನವರ ಸೃಜನಶೀಲತೆಯ ಶ್ರೇಷ್ಠ ಮಾದರಿಗಳು.

ಪಿ.ಹೆಚ್. ಮಹೇಂದ್ರಪ್ಪಅವರದು ಬಹುಮುಖ ವ್ಯಕ್ತಿತ್ವದ ದೈತ್ಯ ಪ್ರತಿಭೆ, ದಣಿವರಿಯದೆ ದುಡಿಯುವ ಮನಸ್ಥಿತಿ, ಲಾಭನಷ್ಟ-ಜಾತಿ ಧರ್ಮಗಳ ಆಚೆಗೆ ಸಮುದಾಯದ ಹಿತದ ಒಟ್ಟು ತುಡಿತ, ಉತ್ಸಾಹಶೀಲತೆ, ನಿರ್ದಿಷ್ಟಗುರಿ, ಸ್ಪಷ್ಟರೂಪರೇಖೆ, ಕಾರ್ಯಸಾಧ್ಯತೆಯ ಪರಿಪಕ್ವಯೋಜನೆ, ಕಾರ್ಯ ಸಾಧನೆಯ ಅಚಲ ತೊಡುಗು, ಉಡದ ಹಿಡಿತ-ಇವು ಇವರ ಸರ್ವ ಶ್ರೇಯಸ್ಸಿನ ಗುಟ್ಟು, ಪ್ರಸಾರೋಪನ್ಯಾಸ, ಆಧ್ಯಾತ್ಮಿಕ ಬೋಧನೆ, ಸಂಘಟನೆ, ಅಧ್ಯಾಪನ, ಆಡಳಿತ, ಸಾಂಸ್ಕೃತಿಕ ಸಂಘಟನೆ, ಆಯೋಜನೆ ಇಲ್ಲೆಲ್ಲಾ ಪಕ್ಕ ಜನಮುಖಿ ಸಮಾಜ ಮುಖತ್ವದ ನಿಚ್ಚಳ ಛಾಪು ಎದ್ದು ಕಾಣತ್ತದೆ. ಪಿ.ಹೆಚ್. ಮಹೇಂದ್ರಪ್ಪ ತಮ್ಮ ಕಾರ್ಯಸಾಧ್ಯತೆಯ ಚೌಕಟ್ಟನ್ನು ಮೊದಲೇ ರೂಪಿಸಿಕೊಳ್ಳುತ್ತಾರೆ. ಇದರಲ್ಲಿ ತಮ್ಮ ದೈನಂದಿನ ಕೃಷಿ, ರೈತಾಪಿ, ಪಶುಸಂಗೋಪನೆಯನ್ನು ಮರೆಯುವುದಿಲ್ಲ. ತಮ್ಮ ಪ್ರಾಂಶುಪಾಲಗಿರಿಯ ತುಂಬು ಜವಾಬ್ದಾರಿಯ ನಡುವೆಯೂ ನೆಲಮೂಲ, ಮನೆಮೂಲದ ಒಕ್ಕಲುತನದತ್ತ ಬೆನ್ನು ತಿರುಗಿಸಿಲ್ಲ. ಬಿಡುವು ಮಾಡಿಕೊಂಡು ಅಡಿಕೆ ಸುಲಿಯುವುದು, ಬೇಯಿಸುವುದು, ಒಣಗಿಸುವುದು, ಮೂಟೆ ಮಾಡುವುದು, ತೋಟದ ತೆಂಗಿನ ಗರಿ ಎತ್ತಿಹಾಕಿಜೋಡಿಸುವುದು ಕಾಯಿ ಕೀಳಿಸುವ, ಕೊಬ್ಬರಿ ಒಡೆಸುವ, ಹೈನುಗಾರಿಕೆ–ಈ ಬಗೆಯ ಕಾರ್ಯ ಬಾಹುಳ್ಯದಿಂದಾಗಿಯೇ ಪಟ್ಟಣದ ವಿಲಾಸ ಜೀವನದ ಎಲ್ಲಾ ಸೌಲಭ್ಯಗಳನ್ನು

ನೀಗಿಸಿಕೊಂಡು ಹಳ್ಳಿಗರಲ್ಲಿ ತಾವು ಒಬ್ಬರಾಗಿ ಅಲ್ಲಿಯೂ ತಮ್ಮ ಪ್ರಗತಿಪರತೆಯನ್ನು ಕಾಯ್ದುಕೊಂಡು ಬಂದಿರುವುದು ಇವರ ಅಪರೂಪದ ತನ, ಈ ಕೃಷಿ ಕಾಯಕ ಇವರ ಆಡಳಿತ, ಅಧ್ಯಾಪನದ ಕಾರ್ಯಗಳಿಗೆ ಅಡಚಣೆಯಾಗಿ ಎಂದೂ ಕಾಣಿಸಿಕೊಂಡಿಲ್ಲ. ಕಸದ ಕೊಳಕು ಜಗವನ್ನು ಸುಂದರ ಭವನ, ಸಾವಿರಾರು ಹೆಣ್ಣು ಮಕ್ಕಳ ಮನೋವಿಕಾಸ, ಸಂಸ್ಕೃತಿ ಸಂವರ್ಧಕ ಕೇಂದ್ರವಾಗಿಸಿದ್ದಾರೆ. ಇಡೀ ತಾಲ್ಲೂಕು ; ವಿದ್ಯಾಕ್ಷೇತ್ರ ತಲೆಎತ್ತಿ ನೋಡಬಹುದಾದ ಬಹು ವಿನ್ಯಾಸ ವಿಸ್ತೀರ್ಣದ ಬಹು ಮಹಡಿ ಕಟ್ಟಡಗಳು ವಿಶಾಲ ಕಾರಿಡಾರ್, ಅವುಗಳ ಸುತ್ತ ಬೆಳೆದು ನಿಂತ ಸಸ್ಯತೋಟ, ಒಂದು ಬದಿಗೆ ಕಲಾಮಂದಿರ, ಸೆಮಿನಾರ್ ಹಾಲ್, ಪ್ರಯೋಗಾಲಯ, ಪ್ರಾಚಾರ್ಯರ ಕಾರ್ಯಾಲಯ, ಅಧ್ಯಾಪಕರ ಕೊಠಡಿ, ಆರಂಭಿಕ ಸುಂದರ ವಿನ್ಯಾಸಗೋಪುರ–ಎಲ್ಲವೂ ಪ್ರಾಪ್ತವಾಗಿರುವುದು ಪ್ರಿನ್ಸಿಪಾಲರಾಗಿ ಈ ಕಾಲೇಜಿಗೆ ಪಿ.ಹೆಚ್. ಮಹೇಂದ್ರಪ್ಪ ಅವರ ಕನಸು. ಇವರ ಕನಸಿಗೆ ರೂಪ ನೀಡಿದವರು ಸಿರಾ ಕ್ಷೇತ್ರದ ಮಾನ್ಯ ಶಾಸಕ – ಮಂತ್ರಿ ಟಿ,ಬಿ. ಜಯಚಂದ್ರರವರು.

ತುಮಕೂರು ಕೇಂದ್ರಕ್ಕೆ ಮಾತ್ರ ಮೀಸಲಾದ ವೃತ್ತಿ ಶಿಕ್ಷಣದ ಪ್ರತಿಷ್ಠೆಯ ಸಿ.ಇ.ಟಿ. ಪರೀಕ್ಷಾ ಕೇಂದ್ರವನ್ನು ಸಿರಾ ತಾಲ್ಲೂಕಿಗೆ ತಂದ ಹಿರಿಮೆ ಇವರದು. ಪರೀಕ್ಷಾ ಪೂರ್ವಭಾವಿ ತಯಾರಿ ಮತ್ತು ತರಬೇತಿಯೂ ಸೇರಿದಂತೆ ಹಲವಾರು ಪರೀಕ್ಷಾ ಕೇಂದ್ರಗಳೂ ಸಿರಾ ನಗರಕ್ಕೆ ಬರಲು ಪಿ,ಹೆಚ್ ಮಹೇಂದ್ರಪ್ಪ ಅವರ ಭವ್ಯಕಟ್ಟಡ, ಹಿಡಿದ ಪಟ್ಟಿನ ಹಿಡಿತ, ತಿರುಗಾಟ ಇವು ಸಾಮಾನ್ಯಕ್ಕೆ ಆಗಬಹುದಾದ ಕೆಲಸಗಳಲ್ಲ. ಈ ಎಲ್ಲವೂ ಕಲ್ಲರಳಿ ಹೂವಾದ ಅನುಭವಿಸಿದ್ದ ಸಾಧನೆಯಾಗಿ ಮೂರ್ತರೂಪ ಪಡೆದು ನಿಂತ ಋಜುರೂಪ. ಶೈಕ್ಷಣಿಕವಾಗಿ ಆ ಮಟ್ಟಕ್ಕೆ ಪಿ.ಹೆಚ್ ಮಹೇಂದ್ರಪ್ಪ ಬೆಳೆಸಿದರು. ಶೈಕ್ಷಣಿಕ ಘನತೆಗೆ ಶುಭದ ಮುನ್ನುಡಿ ಬರೆದು. ಸಿರಾದಲ್ಲಿ ಸಿ.ಇ.ಟಿ. ಬರೆದು ಈ ತಾಲ್ಲೂಕಿನಲ್ಲಿಯೇ ಓದಿದ ಇಪ್ಪತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು ಇಂದು ವೈದ್ಯಕೀಯ ವ್ಯಾಸಾಂಗ ಮಾಡುತ್ತಿದ್ದಾರೆ. ನೂರಾರು ವಿದ್ಯಾರ್ಥಿಗಳು ವೆಟರ್ನರಿ ಸೈನ್ಸ್ ಓದುತ್ತಿದ್ದಾರೆ. ಸಾವಿರಾರು ವಿದ್ಯಾರ್ಥಿಗಳು ತಾಂತ್ರಿಕ ಶಿಕ್ಷಣ (ಬಿ.ಇ) ವ್ಯಾಸಂಗ ಮಾಡುತ್ತಿದ್ದಾರೆ. ಈ ಕೀರ್ತಿ ಪಿ.ಹೆಚ್. ಮಹೇಂದ್ರಪ್ಪ ಅವರಿಗೆ ಸಲ್ಲಲೇಬೇಕು. ಏಕೆಂದರೆ ಇದರ ಕಲ್ಪನೆಯ ಕನಸು ಯೋಜನೆಯ ರೂವಾರಿ ಪಿ.ಹೆಚ್. ಮಹೇಂದ್ರಪ್ಪನವರು.

"ದುಡಿಯವವರು ಎಲ್ಲೆಡೆ ಇರುತ್ತಾರೆ. ಆದರೆ ಅವರಿಂದ ಸಮರ್ಥ ಕೆಲಸ ತೆಗೆಸಿಕೊಳ್ಳುವವರು ಎಲ್ಲೆಡೆ ಇರುವುದಿಲ್ಲ" ಇದು ಉಪನಿಷತ್ತಿನ ಒಂದು ಮಾತು. ಯಾವುದೇ ಯೋಜನೆ ಅಭಿವೃದ್ಧಿ ಕೆಲಸಕ್ಕೆ ದುಡಿಯುವ ವರ್ಗ ತಮ್ಮನ್ನು ತಾವೇ ತೊಡಗಿಸಿಕೊಂಡ ನಿರ್ದೇಶನ ಅಪರೂಪ. ಹೀಗಾಗಿಯೇ ನಮ್ಮ ಕೋಟ್ಯಾಂತರ ಯೋಜನೆ ಹಣ ವಿಪರ್ಯಾಸವಾಗಿ ಕೈಗೂಡದೆ ಸೊರಗಿ ಹೋಗುತ್ತವೆ. ಇದಕ್ಕೆ ಪಿ.ಹೆಚ್. ಮಹೇಂದ್ರಪ್ಪ ಸಂಪೂರ್ಣ ಹೊರತು ಸರ್ಕಾರ ಯಾವ ಪಕ್ಷದ್ದಿರಲಿ, ಅಧಿಕಾರಿ ಯಾವ ಜಾತಿಯವರಾಗಿರಲಿ, ಆಡಳಿತ ಮಂಡಳಿಯಲ್ಲಿ ಕಾನೂನು ಬದ್ಧವಾಗಿ ಯಾರೇ ಬರಲಿ – ಅವರೆಲ್ಲರನ್ನೂ ಮೆಚ್ಚುವ, ಮಣಿಸುವ ಕಾರ್ಯಚಟುವಟಿಕೆಯ ಮುಂದೆ ಜಾತಿ,

ಧರ್ಮ, ವಯಸ್ಸು, ಪಕ್ಷ ಶೂನ್ಯವಾಗಿ ಬಿಡುತ್ತದೆ. ಒಂದು ಪರಿಪಕ್ವ ಕೆಲಸ ಯಶೋಗಾರಿಕೆ ಬಂದಾಗ ಎಲ್ಲರ ಕಣ್ಣು ಮನಸ್ಸು ಅತ್ತ ವಾಲುತ್ತದೆ. ಇದರ ಕಾರ್ಯಪಾಲಕರನ್ನು ಎಲ್ಲರಿಗಿಂತ ಭಿನ್ನವಾಗಿ ನೋಡುತ್ತಾರೆ. ಈ ಬಗೆಯ ವಾತಾವರಣ ನಿರ್ಮಿಸುವ ಸದೃಢ ಮನಸ್ಸು, ಶುದ್ಧ ಹಸ್ತ ಆರೋಗ್ಯವಂತ ಭಾವನೆಯೂ ತಮ್ಮೆಲ್ಲ ಪ್ರಗತಿಗೆ ಮೊದಲ ಮೆಟ್ಟಿಲು–ಇಲ್ಲಿಯೂ ತೂಕ ತಪ್ಪಿದ ಮಾತು, ಕುಹಕಿ, ಅತೃಪ್ತಿ, ಅಸಮಧಾನಇಲ್ಲವೆಂದಲ್ಲ, ಈ ಎಲ್ಲದರೊಳಗೂ ಮಾಡಿರುವ ಮಾಡುತ್ತಿರುವ ಸಾಧನೆಯ ಎತ್ತರವೊಂದೇ ಇಂತೆಲ್ಲಾ ವಿಕೃತ ಮನಕ್ಕೆ ಶ್ರೇಷ್ಠ ಮಾರುತ್ತರವಾಗಿ ಹತ್ತಾರುಧ್ವನಿ – ಪ್ರತಿಧ್ವನಿಯಾಗಿ ಮಾರ್ಧನಿಸುತ್ತಲೇ ಇರುತ್ತವೆ ಇದು ಮಹೇಂದ್ರಪ್ಪನವರ ಘನವೆತ್ತ ಕೆಲಸಕ್ಕೆ ಬೆಟ್ಟು ಮಾಡಿತೋರಬಹುದಾದ ನಿದರ್ಶನಗಳು ಸಾಧನೆಯ ಸಾಲು ದೀಪಗಳು.

ಮಹೇಂದ್ರಪ್ಪ ತಾಲ್ಲೂಕಿಗೊಂದು ಮಾತ್ರವಲ್ಲ, ಮನುಕುಲಕ್ಕೆ ಆಡಳತಾತ್ಮಕ ಮಾದರಿ. ಮಾನವೀಯ ಅಂತಃಕರಣ, ಪಾರದರ್ಶಕ ಆಡಳತ, ಪ್ರಜಾಪ್ರಭುತ್ವ ಮಾದರಿಯ ನಡಾವಳ – ಜೊತೆಗೆ, ಅಂದಿನ ಯಾವುದೇ ಕೆಲಸವಿರಲಿ ಅಂದೇ ಮುಗಿಸುಬಿಡುವ ಇವರ ಶಿಸ್ತು ಬದ್ಧತೆ, ಇತ್ತೀಚಿನ ದಿನಗಳಲ್ಲಿ ಈ ತನ ತೀರಾಅಪರೂಪ. ಒಬ್ಬ ಪ್ರಾಚಾರ್ಯರಾಗಿ ಮಹೇಂದ್ರಪ್ಪನವರು ಅಪರೂಪದ ಒಬ್ಬ ಯಶಸ್ಸು ಕಂಡಿರುವುದು ಈ ಮಾದರಿಯ ನಡಾವಳಕೆಗಳಂದಾಗಿಯೇ. ಈ ಮಾತುಗಳನ್ನು ಸಮರ್ಥಿಸಿವಂತೆ ನಮ್ಮ ಶಾಸಕರು, ಬೇರೆ ಅಧಿಕಾರಿಗಳು ಸಂಬಂಧಿಸಿದವರೊಂದಿಗೆ ಸಂವಾದಿಸುವಾಗ ತಟ್ಟನೆ ಮಹೇಂದ್ರಪ್ಪ ಅವರನ್ನು ಉಲ್ಲೇಖಿಸುತ್ತಾರೆ "ಆ ಗರ್ಲ್ಸ್‌ಕಾಲೇಜಿನ ಮಹೇಂದ್ರಪ್ಪ ಅವರನ್ನು ನೋಡಿರಿ, ಹೆಂಗೈತ್ರಿ ಆ ಕಾಲೇಜು ನಿಮಗೆ ಏನೇನು ಬೇಕು ಬೇಡ ಅನ್ನೋದು ನನಗೇನು ತಿಳಯಬೇಕು ಎಲ್ಲವನ್ನೂ ನಾನೇ ಹೇಳ–ಕೇಳ ಮಾಡಿಸೊಕಾಗುತ್ತಾ ಮಹೇಂದ್ರಪ್ಪನೂ ನಿಮ್ಮ ಹಾಗೆ ಸರ್ಕಾರಿ ನೌಕರ, ಅವರು ಮೊನ್ನೆ ಮೊನ್ನೆ ಸಿರಾಕ್ಕೆ ಬಂದವರು. ಆ ಕಾಲೇಜಿನ ಡೆವಲಪ್‌ಮೆಂಟಿಗಾಗಿ ಆ ಮನುಷ್ಯರಾತ್ರಿ ಹಗಲು ಬೆನ್ನು ಹತ್ತುತ್ತಾರೆ. ಅವರ ಕೆಲಸಕ್ಕೆ ಇಲ್ಲ ಅನ್ನೋ ಮನಸೇ ಬರಲ್ಲ. ಅದು ಕಣ್ರೀ ಗೌರ್ನ್‌ಮೆಂಟ್ ಸರ್ವಿಸ್. ಜಿಲ್ಲೆಯ ವಿಸ್ತೃತ ಸಾಮಾಜಿಕ ಅರಿವು ಪ್ರಗತಿಯ ಚಿತ್ರಣ ತುಂಬಿಕೊಂಡಿರುವ ಜಿಲ್ಲೆಯ ಏಕೈಕ ಹಿರಿಯ ಶಾಸಕರು–ಮಂತ್ರಿಗಳು, ಹೇಳುವ ಅದರಲ್ಲೂ ಹಿರಿಯ ಅಧಿಕಾರಿಗಳೊಂದಿಗೆ ಹೇಳುವ ಈ ಮಾತು ಮಹೇಂದ್ರಪ್ಪ ಅವರ ಶ್ರದ್ಧಾವಂತ–ಪ್ರಗತಿ ಪರ ಆಡಳತ ಕಟ್ಟುವ ರಚನಾತ್ಮಕ ಕೆಲಸಕ್ಕೆ ಅಪರೂಪದ ಉದಾಹರಣೆ. ಟಿ.ಬಿಜಯಚಂದ್ರರವರು ಅಭಿವೃದ್ಧಿಗೆ ಹೊತ್ತುಕೊಡುವ ಯಾವುದೇ ಯೋಜನೆ ಇರಲಿ ಅದು ಸಿರಾ ಕ್ಷೇತ್ರಕ್ಕೆ ಇರಲಿ ಎಂಬ ವಿಪರೀತ ಕನಸಿನ ಆಸಾಮಿ. ಈ ಬಗೆಯ ಕ್ರಿಯಾಶೀಲತೆ ಸಮರ್ಪಕ ಜೋಡಿ ಮಹೇಂದ್ರಪ್ಪ ಎಂಬುದು ಅಭಿಮಾನದ ಮಾತು.